ಹುಬ್ಬಳ್ಳಿ-ಧಾರವಾಡ ನಗರದಲ್ಲಿ ಕುಡಿಯುವ ನೀರಿನ ಪೂರೈಕೆಗಾಗಿ ಯೋಜನೆ

2587(3407) ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಬ್ಬಳ್ಳಿ-ಧಾರವಾಡ ಮಹಾ ನಗರಪಾಲಿಕೆಯಿಂದ ಕುಡಿಯುವ ನೀರನ್ನು ಪೂರೈಸುವ ಸಲುವಾಗಿ ಯೋಜನೆಯನ್ನು ಸಿದ್ದಪಡಿಸಲಾಗಿದೆಯೇ;

ಆ) ಹಾಗಿದ್ದರೆ, ಈ ಯೋಜನೆಯನ್ನು ಯಾವಾಗ ಸಿದ್ದಪಡಿಸಲಾಯಿತು ಇದರ ಅಂದಾಜು ವೆಚ್ಚ ಎಷ್ಟು;

ಇ) ಈ ಯೋಜನೆಯನ್ನು ಯಾವ ಕಂಪನಿಗೆ ವಹಿಸಲಾಗಿದೆ ವಿವರ ನೀಡುವುದು;

ಈ) ಯೋಜಿಸಲಾಗಿದ್ದ ಅಂದಾಜು ವೆಚ್ಚಕ್ಕಿಂತ 20 ಕೋಟಿ ರೂಪಾಯಿಗಳು ಅಧಿಕವಾಗಿರುವುದು ನಿಜವೇ; ಇದಕ್ಕೆ ಕಾರಣಗಳೇನು;

ಉ) ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :

ಅ) ಹೌದು

ಆ) ಈ ಯೋಜನೆಗೆ ಈಗಾಗಲೇ ಸರ್ಕಾರವು ಆದೇಶ ಸಂ. ಯುಡಿಡಿ 04 ಯುಡಬ್ಲ್ಯೂಎಸ್ 98 ದಿನಾಂಕ: 22.8.2000 ರಲ್ಲಿ ರೂ. 4448.00 ಲಕ್ಷಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿದೆ.

ಇ) ಸದರಿ ಯೋಜನೆಯನ್ನು ಟೆಂಡರ್ ಆಧಾರದ ಮೇಲೆ ಮೆ:ಎಲ್ ಅಂಡ್ ಟಿ ಕಂಪನಿ, ಬೆಂಗಳೂರು ಇವರಿಗೆ ರೂ. 3040.00 ಲಕ್ಷಗಳಿಗೆ ವಹಿಸಲಾಗಿದೆ. ಸದರಿ ಟೆಂಡರಿನಲ್ಲಿ 27 ಕಿ.ಮೀ. ಎಂ.ಎಸ್.ಪೈಪ್ ಅಳವಡಿಸುವುದು ಮತ್ತು ಐದು ಜಲಸಂಗ್ರಹಾಗಾರ ಕಟ್ಟುವ ಕಾಮಗಾರಿಗಳು ಒಳಗೊಂಡಿರುತ್ತದೆ. ಕಾಮಗಾರಿಗಳು ಮುಗಿಯುವ ಹಂತದಲ್ಲಿದೆ.

ಈ) ಸದರಿ ಯೋಜನೆಯಡಿಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ನೀಗಿಸಲು ಅತೀ ಅವಶ್ಯಕವಿರುವ ಹೆಚ್ಚಿನ ಕಾಮಗಾರಿಗಳು ಅಂದರೆ ನೀರಸಾಗರ ಕೆರೆಯ ಹೂಳು ತೆಗೆದು ಕೆರೆಯನ್ನು ಪುನರುಜ್ಜೀವನಗೊಳಿಸುವುದು, ಮಲಪ್ರಭಾ ಜಲಾಶಯದಲ್ಲಿ ಜಾಕ್‌ವೆಲ್ ಕಟ್ಟುವುದು, ಅಮ್ಮಿನಬಾವಿಯಲ್ಲಿ ಜಲಶುದ್ಧೀಕರಣ ಘಟಕ ನಿರ್ಮಿಸುವುದು ಹಾಗೂ ಜಾಕ್‌ವೆಲ್‌ನಲ್ಲಿ ಟರ್ಬೈನ್ ಪಂಪ್‌ಸೆಟ್ ಅಳವಡಿಸುವ ಕಾಮಗಾರಿಗಳು ಕೈಗೆತ್ತಿಕೊಂಡಿರುವುದರಿಂದ ಸದರಿ ಯೋಜನೆಯ ವೆಚ್ಚವು ರೂ. 19.36 ಕೋಟಿಗಳು ಹೆಚ್ಚಾಗಿರುತ್ತದೆ.

ಉ) ಸದರಿ ಯೋಜನೆಯನ್ನು ಮಾರ್ಚ್-2004ರಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಬೆಂಗಳೂರು ಮಹಾನಗರ ಪಾಲಿಕೆಯ ಕಾಮಗಾರಿಗಳು

2588(2756) ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಹಾಲಿ ನಡೆಯುತ್ತಿರುವ ಪಾದಚಾರಿ ಮಾರ್ಗಗಳ ನವೀಕರಣವನ್ನು ಎಂದು ಪ್ರಾರಂಭಿಸಲಾಯಿತು;

ಆ) ಈ ಕಾಮಗಾರಿಗೆ ಮಂಜೂರಾದ ಮೊತ್ತವೆಷ್ಟು;

ಇ) ಯಾರಿಗೆ ಈ ಕಾಮಗಾರಿಯ ಗುತ್ತಿಗೆಯನ್ನು ನೀಡಲಾಗಿದೆ;